ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಜಲಾಯನ ಅಭಿವೃದ್ಧಿ ಇಲಾಖೆಗೆ ಬಂದಿರುವ ಅನುದಾನ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 65 : 34
ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು)
ಉತ್ತರಿಸಬೇಕಾದ ಸಚಿವರು : ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು)

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಯಚೂರು ಜಿಲ್ಲೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವತಿಯಿಂದ ಜಲಾನಯನ ಅಭಿವೃದ್ಧಿ ಇಲಾಖೆಗೆ ಬಿಡುಗಡೆಯಾದ ಹಣ ಎಷ್ಟು? (3 ವರ್ಷಗಳ ವಿವರ ನೀಡುವುದು)</td><td>ರಾಯಚೂರು ಜಿಲ್ಲೆಗೆ ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾದ ಅನುದಾನದ ವಿವರ
<table>
<tr><th>ವರ್ಷ</th><th>ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ)</th></tr>
<tr><td>2005–06</td><td>1145.626</td></tr>
<tr><td>2006–07</td><td>776.544</td></tr>
<tr><td>2007–08</td><td>875.141</td></tr>
<tr><td>ಒಟ್ಟು</td><td>2797.311</td></tr>
</table></td></tr>
<tr><td>ಆ</td><td>ಹಾಗಿದ್ದಲ್ಲಿ, ಯಾವ ಯಾವ ತಾಲ್ಲೂಕಿಗೆ ಎಷ್ಟೆಷ್ಟು ಹಣವನ್ನು ಹಂಚಿಕೆ ಮಾಡಲಾಗಿದೆ? ತಾಲ್ಲೂಕುವಾರು ವಿವರ ನೀಡುವುದು.</td><td>ತಾಲ್ಲೂಕುವಾರು ಅನುದಾನ ಹಂಚಿಕೆ ವಿವರ (ರೂ. ಲಕ್ಷಗಳಲ್ಲಿ)
<table>
<tr><th>ವರ್ಷ</th><th>ರಾಯಚೂರು</th><th>ಮಾನ್ವಿ</th><th>ದೇವದುರ್ಗ</th><th>ಲಿಂಗಸುಗೂರು</th><th>ಸಿಂಧನೂರು</th></tr>
<tr><td>2005–06</td><td>211.679</td><td>291.573</td><td>220.352</td><td>259.357</td><td>162.665</td></tr>
<tr><td>2006–07</td><td>122.475</td><td>249.979</td><td>126.727</td><td>151.483</td><td>125.88</td></tr>
<tr><td>2007–08</td><td>109.544</td><td>371.123</td><td>121.925</td><td>139.89</td><td>132.659</td></tr>
<tr><td>ಒಟ್ಟು</td><td>443.698</td><td>912.675</td><td>469.004</td><td>550.73</td><td>421.204</td></tr>
</table></td></tr>
<tr><td>ಇ</td><td>ಸಿಂಧನೂರು ತಾಲ್ಲೂಕಿಗೆ ಜಿಲ್ಲಾ ಮತ್ತು ತಾಲ್ಲೂಕ್ ಪಂಚಾಯತಿ ವತಿಯಿಂದ ಕೃಷಿ ಇಲಾಖೆಗೆ ಬಿಡುಗಡೆಯಾದ ಹಣ ಎಷ್ಟು ? (3 ವರ್ಷಗಳ ವಿವರ ನೀಡುವುದು)</td><td>ಸಿಂಧನೂರು ತಾಲ್ಲೂಕಿಗೆ ಬಿಡುಗಡೆಯಾದ ವರ್ಷವಾರು ಹಣದ ವಿವರ ಇಂತಿದೆ.
(ಲಕ್ಷ ರೂ.ಗಳಲ್ಲಿ)
<table>
<tr><th>ವಿವರ</th><th colspan="2">ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ)</th></tr>
<tr><td></td><td>2006–07</td><td>2007–08</td></tr>
<tr><td>ತಾಲ್ಲೂಕು ಪಂಚಾಯಿತಿ</td><td>3.21</td><td>3.21</td></tr>
<tr><td>ಜಿಲ್ಲಾ ಪಂಚಾಯಿತಿ</td><td>44.80</td><td>64.29</td></tr>
<tr><td>ಒಟ್ಟು</td><td>48.01</td><td>67.5</td></tr>
</table></td></tr>
<tr><td>ಈ</td><td>ಜಲಾನಯನ ಅಭಿವೃದ್ಧಿ ಇಲಾಖೆ ವತಿಯಿಂದ ಸಿಂಧನೂರು ತಾಲ್ಲೂಕಿಗೆ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ? (ವಿವರ ನೀಡುವುದು)</td><td>ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಸಿಂಧನೂರು ತಾಲ್ಲೂಕಿನಲ್ಲಿ ಕೆಳಕಂಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.
1. ಸಮಪಾತಳಿ ಬದು 2. ಕೊರಕಲು ತಡೆ
3. ತಡೆ ಅಣೆಕಟ್ಟು 4. ಕೃಷಿ ಹೊಂಡ
4. ಅರಣ್ಯೀಕರಣ 6. ತೋಟಗಾರಿಕೆ
7. ಉಪ್ಪು ಮತ್ತು ಕ್ಷಾರೀಯ ಭೂ ಅಭಿವೃದ್ಧಿ 8. ಪಶು ಚಿಕಿತ್ಸಾ ಶಿಬಿರ</td></tr>
<tr><td>ಉ</td><td>ಹಾಗಿದ್ದಲ್ಲಿ, ಆ ಎಲ್ಲಾ ಕಾಮಗಾರಿಗಳು ಪೂರ್ಣವಾಗಿದೆಯೇ ಅಥವಾ ಇಲ್ಲವೆ ? (ವಿವರ ನೀಡುವುದು)</td><td>ಕೈಗೊಂಡ ಕಾಮಗಾರಿಗಳು ಪೂರ್ಣಗೊಂಡಿವೆ. ವಿವರಗಳನ್ನು ಅನುಬಂಧ –I ರಲ್ಲಿ ನೀಡಲಾಗಿದೆ.</td></tr>
</table>

ಅನುಬಂಧ –1

ಜಲಾನಯನ ಅಭಿವೃದ್ದಿ ಇಲಾಖೆ ವತಿಯಿಂದ ಸಿಂಧನೂರು ತಾಲ್ಲೂಕಿನಲ್ಲಿ ಕೈಗೆತ್ತಿಕೊಳ್ಳಲಾದ ಕಾಮಗಾರಿಗಳ ವಿವರ

ಕ್ರ ಸಂ.	ಯೋಜನೆಯ ಹೆಸರು	ಕಾಮಗಾರಿಯ ಹೆಸರು	ಘಟಕ	2005–06		2006–07		2007–08	
				ಭೌತಿಕ ಸಾಧನೆ	ಕಾಮಗಾರಿಯ ಹಂತ	ಭೌತಿಕ ಸಾಧನೆ	ಕಾಮಗಾರಿಯ ಹಂತ	ಭೌತಿಕ ಸಾಧನೆ	ಕಾಮಗಾರಿಯ ಹಂತ
1	ಸಮಗ್ರ ಬಂಜರು ಭೂಮಿ ಪ್ರದೇಶಾಭಿವೃದ್ದಿ ಯೋಜನೆ (IWDP)	ಸಮಪಾತಳಿ ಬದು	ಹೆಕ್ಟೇರ್	560	ಪೂರ್ಣ	608	ಪೂರ್ಣ	1934	ಪೂರ್ಣ
		ಕೊರಕಲು ತಡೆ	ಸಂಖ್ಯೆ	36	ಪೂರ್ಣ	110	ಪೂರ್ಣ	56	ಪೂರ್ಣ
		ಚೆಕ್ ಡ್ಯಾಂ	ಸಂಖ್ಯೆ	9	ಪೂರ್ಣ	27	ಪೂರ್ಣ	17	ಪೂರ್ಣ
		ಕೃಷಿ ಹೊಂಡ	ಸಂಖ್ಯೆ	0	–	0	–	2	ಪೂರ್ಣ
		ಅರಣ್ಯೀಕರಣ	ಹೆಕ್ಟೇರ್	127	ಪೂರ್ಣ	145	ಪೂರ್ಣ	156	ಪೂರ್ಣ
		ತೋಟಗಾರಿಕೆ	ಹೆಕ್ಟೇರ್	136	ಪೂರ್ಣ	158	ಪೂರ್ಣ	204	ಪೂರ್ಣ
		ಪಶು ಸಂಗೋಪನೆ	ಹೆಕ್ಟೇರ್	0	–	42	ಪೂರ್ಣ	0	–
		ಪಶು ಚಿಕಿತ್ಸಾ ಶಿಬಿರ AHC	ಸಂಖ್ಯೆ	0	–	0	–	12	ಪೂರ್ಣ
2.	ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ (SGRY) (ZP)	ಸಮಪಾತಳಿ ಬದು	ಹೆಕ್ಟೇರ್	77	ಪೂರ್ಣ	0	–	0	–
		ಚೆಕ್ ಡ್ಯಾಂ	ಸಂಖ್ಯೆ	10	ಪೂರ್ಣ	0	–	0	–
3.	ಉಪ್ಪು ಮತ್ತು ಕ್ಷಾರೀಯ ಭೂ ಅಭಿವೃದ್ಧಿ ಯೋಜನೆ (LR)	ಲ್ಯಾಂಡ್ ರಿಕ್ಲಮೇಶನ್	ಹೆಕ್ಟೇರ್	47	ಪೂರ್ಣ	89	ಪೂರ್ಣ	75	ಪೂರ್ಣ
4.	ಸುವರ್ಣ ಕೃಷಿ ಹೊಂಡ (SKH)	ಕೃಷಿ ಹೊಂಡ	ಸಂಖ್ಯೆ	0	–	365	ಪೂರ್ಣ	40	ಪೂರ್ಣ
5.	ಆರ್.ಐ.ಡಿ.ಎಫ್. ಯೋಜನೆ (RIDF)	ಚೆಕ್ ಡ್ಯಾಂ	ಸಂಖ್ಯೆ	3	ಪೂರ್ಣ	0	–	0	–
		ಕೃಷಿ ಹೊಂಡ	ಸಂಖ್ಯೆ	8	ಪೂರ್ಣ	0	–	7	ಪೂರ್ಣ
6.	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY)	ಕೃಷಿ ಹೊಂಡ	ಸಂಖ್ಯೆ	0	–	0	–	50	ಪೂರ್ಣ
7.	ವಿಶೇಷ ಘಟಕ ಯೋಜನೆ (SCP)	ಕೃಷಿ ಹೊಂಡ	ಸಂಖ್ಯೆ	5	ಪೂರ್ಣ	3	ಪೂರ್ಣ	4	ಪೂರ್ಣ

ಶ್ರೀ ನಾಡಗೌಡ ವೆಂಕಟರಾವ್ :– ಮಾನ್ಯ ಅಧ್ಯಕ್ಷರೆ. ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಪೂರ್ಣವಾದ ವಿವರಗಳನ್ನು ಕೇಳಿದರೆ ಕೇವಲ ಎಲ್ಲೆಲ್ಲಿ ಭೌತಿಕ ಸಾಧನೆ ಎಷ್ಟೆಂದು ಮಾತ್ರ ಉತ್ತರದಲ್ಲಿ ಹೇಳಿದ್ದಾರೆ. ಆದರೆ. ಯಾವ ಊರಿನಲ್ಲಿ ತೆಗೆದುಕೊಂಡಿದ್ದಾರೆ ಎಂಬ ಮಾಹಿತಿ ಇದರಲ್ಲಿ ಇಲ್ಲ. ದಯವಿಟ್ಟು ಆ ಮಾಹಿತಿಯನ್ನು ಒದಗಿಸಿದರೆ ನಮಗೆ ಗೊತ್ತಾಗುತ್ತದೆಂಬ ಉದ್ದೇಶದಿಂದ ಎಲ್ಲಾ ಮಾಹಿತಿಗಳನ್ನು ನಾನು ಕೇಳಿದ್ದೇನೆ. ಮತ್ತೊಂದು ಪ್ರಶ್ನೆ ಏನೆಂದರೆ. ಸಮಗ್ರ ಬಂಜರು ಭೂಮಿ ಪ್ರದೇಶಾಭಿವೃದ್ಧಿ ಯೋಜನೆಯನ್ನು ತೆಗೆದುಕೊಂಡಿರುವ ಬಗ್ಗೆ ಹೇಳಿದ್ದೀರಿ. ಇದರಲ್ಲಿ ಸುಮಾರು 1934 ಕೆಲಸಗಳು ಪೂರ್ಣವಾಗಿವೆ ಎಂದು ಹೇಳಿದ್ದೀರಿ. ಆದರೆ. ಎಲ್ಲೆಲ್ಲಿ ಈ ಕೆಲಸಗಳು ಮಾಡಲಾಗಿದೆ ಎಂಬ ಮಾಹಿತಿ ನನಗೆ ಸಿಕ್ಕಿಲ್ಲ. ಮತ್ತೆ ನೀರಾವರಿ ಪ್ರದೇಶಗಳಲ್ಲಿಯೂ ಕೂಡ ಈ ರೀತಿಯಾಗಿ ಬಂಜರು ಭೂಮಿಗಳಾಗಿವೆ. ಮೇಲುಗಡೆಯಿಂದ ನೀರು ಹರಿಸುವುದರಿಂದ ಕೆಳಗಡೆ ಇರತಕ್ಕಂಥ ಬಡವರ ಭೂಮಿಗಳು ಬಂಜರು ಭೂಮಿ ಆಗಿರತಕ್ಕಂಥದ್ದನ್ನು ನಾನು ಗಮನಿಸಿದ್ದೇವೆ. ಆದ್ದರಿಂದ. ಈ ಪ್ರದೇಶಗಳಲ್ಲಿಯೂ ಇಂಥ ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆಯೇ ಅಥವಾ ಇಲ್ಲವೇ ಎಂಬ ಮಾಹಿತಿಯನ್ನು ಈ ಸಂದರ್ಭದಲ್ಲಿ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ. ಮತ್ತೆ ನಾನು ಈಗಾಗಲೇ ಕೇಳಿರತಕ್ಕಂಥ ಪ್ರಶ್ನೆಗೆ ಪೂರ್ಣವಾದ ಉತ್ತರವನ್ನು ಅಂದರೆ ಎಲ್ಲೆಲ್ಲಿ ತೆಗೆದುಕೊಳ್ಳಲಾಗಿದೆ ಎಂಬ ವಿವರವನ್ನು ಕೊಟ್ಟಿಲ್ಲ. ಆದ್ದರಿಂದ. ಸದರಿ ವಿವರಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎ.ರವೀಂದ್ರನಾಥ್ ;– ಮಾನ್ಯ ಅಧ್ಯಕ್ಷರೆ. ಅವರ ಪ್ರಶ್ನೆಗೆ ಸಂಬಂಧಪಟ್ಟಂತೆ ಎಲ್ಲಾ ವಿವರಗಳನ್ನು ಒದಗಿಸಿಕೊಟ್ಟಿದ್ದೇವೆ. ಮತ್ತೆ ಯಾವ್ಯಾವುದಕ್ಕೆ ಎಷ್ಟೆಷ್ಟು ಹಣವೆಂದು ಸಹ ಸ್ಪಷ್ಟವಾಗಿ ತಿಳಿಸಿದ್ದೇವೆ. ಕೇಂದ್ರದಿಂದ ಮತ್ತು ರಾಜ್ಯ ಸರ್ಕಾರದಿಂದ ಎಷ್ಟು ಹಣ ಬಂದಿದೆ ಎಂದು ಕೇಳಿದ್ದಾರೆ. ಕೇಂದ್ರ ಸರ್ಕಾರದಿಂದ 20 ಕೋಟಿ 53 ಲಕ್ಷ ಮತ್ತು ರಾಜ್ಯ ಸರ್ಕಾರದಿಂದ 7 ಕೋಟಿ 43 ಲಕ್ಷ ರೂಪಾಯಿಯಗಳನ್ನು ಕೊಡತಕ್ಕಂಥದ್ದನ್ನು ಮಾಡಲಾಗಿದೆ. ಇದು ಯಾವ್ಯಾವ ರೀತಿ ಏನು ಎಂಬುದರ ಪ್ರಶ್ನೆ ಇದರಲ್ಲಿ ಇರಲಿಲ್ಲ. ಆದರೆ. ಅವರು ಕೇಳಿರತಕ್ಕಂಥದ್ದಕ್ಕೆ ಸ್ಪಷ್ಟವಾದ ಉತ್ತರವನ್ನು ತಿಳಿಸಿದ್ದೇವೆ.